ಸಾಕ್ಷಿಯನ್ನು ದಿನಾಂಕ 14-03-2023 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಮಗೆ ಎದುರುದಾರರು ಲೈನನ್ನು ಎಳೆಯುವ ಸಮಯದಲ್ಲಿ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಪರಿಹಾರವಾಗಿ ಎರಡು ಲಕ್ಷ ಚಿಲ್ಲರೆ ಹಣವನ್ನು ನೀಡಿದ್ದಾರೆ ಎಂದರೆ ಸರಿ. ಜಮೀನು ಈಗಲೂ ನಮ್ಮ ಸ್ವಾಧೀನದಲ್ಲಿದೆ ಎಂದರೆ ಸರಿ. ಲೈನಿನ ಕೆಳಭಾಗದಲ್ಲಿ ಬೆಳೆಯನ್ನು ಬೆಳೆಯುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ 15 ಹುಣಸೇ ಗಿಡಗಳು, ಒಂದು ಮಾವಿನ ಮರ, ಎರಡು ಬೇವಿನ ಮರಗಳನ್ನೂ ಸಹ ಲೈನನ್ನು ಎಳೆಯುವ ಸಮಯದಲ್ಲಿ ಕತ್ತರಿಸಿ ಹಾಕಿದ್ದಾರೆ. 15 ಹುಣಸೇ ಮರಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಂದ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.